

ಮರಿಗೆ ತುತ್ತು ನೀಡುತ್ತಿರುವ ನೀಲಿ ನಾಮದ ಕೋಳಿ

# ಜಲಪಕ್ಷಿಗಳ ಸಂಸಾರ

■ ಎಂ.ಆರ್. ಮಂಜುನಾಥ್

ಮುಂಗಾರು ಋತುವಿನಲ್ಲಿ ಜೀವ ತಳೆಯುವ ಕೆರೆಕಟ್ಟೆ, ಜಲಪಾತಗಳನ್ನು ನೋಡುವುದು ಒಂದು ಖುಷಿಯಾದರೆ, ಆ ನೀರ ಸೆಲೆಗಳ ಸುತ್ತ ಠಿಕಾಣಿ ಹೂಡುವ ಹಕ್ಕಿಗಳನ್ನು ಕಣ್ತುಂಬಿಕೊಳ್ಳುವುದು ಮತ್ತೊಂದು ಸುಂದರ ಅನುಭವ.


ಈ ಬಾರಿ ಮುಂಡಗೋಡಿನ ಕೆರೆಯಲ್ಲಿ ಹಕ್ಕಿಗಳ ಕಲರವ ಹೆಚ್ಚಾಗಿಯೇ ಇತ್ತು. ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಇವುಗಳ ಸಂತಾನೋತ್ಪತ್ತಿ ಸಮಯವಾದ್ದರಿಂದ ಕೆರೆಯಂಗಳದಲ್ಲಿ ಸಂಸಾರ ಹೂಡಿದ್ದ ಸುಂದರ ಹಕ್ಕಿಗಳು ಕಣ್ಣಿಗೆ ಬಿದ್ದವು.

ನೀಲಿ ನಾಮ ಕೋಳಿ (ಪರ್ಪಲ್ ಮೂರ್‌ಹೆನ್) ಹಕ್ಕಿ ಆಹಾರ ಹುಡುಕಿಕೊಂಡು ಹೋಗುತ್ತಿದ್ದರೆ, ಮಳೆಯಲ್ಲಿಯೇ ಮರಿಯು ತಾಯಿಯನ್ನು ಹಿಂಬಾಲಿಸುತ್ತಿತ್ತು. ಹೆತ್ತ ಕರುಳು, ಮರಿ ಮಳೆಯಲ್ಲಿ ಎಲ್ಲಿ ನೆನೆಯುತ್ತದೋ ಎಂದು ತನ್ನ ರೆಕ್ಕೆಗಳಿಂದ ಮರಿಗೆ ರಕ್ಷಣೆ ಕೊಡುವ ದೃಶ್ಯವಂತೂ ಅದ್ಭುತವಾಗಿತ್ತು. ಗಳಿಗೆಗೊಮ್ಮೆ ಮರಿಗಳಿಗೆ ಕಮಲದ ಹೂವು ಕಿತ್ತುತಂದು ತಿನ್ನಿಸುತ್ತಿತ್ತು. ಈ ಹಕ್ಕಿಯು ಜೊಂಡು ಹುಲ್ಲಿನಿಂದ ಕೂಡಿದ ತೇಲುವ ಗೂಡನ್ನು ನಿರ್ಮಿಸಿ, ಕಂದು ಮಿಶ್ರಿತ ಕೆಂಪು ಚುಕ್ಕೆಗಳಿರುವ 4 ರಿಂದ 7 ಮೊಟ್ಟೆಗಳನ್ನು ಇಡುತ್ತದೆ. ಇವು ನೋಡಲು ಕೋಳಿ ಗಾತ್ರದ ನೇರಳೆ ಮಿಶ್ರಿತ ನೀಲಿ ಜಲಪಕ್ಷಿ. ಹಣೆಯ ಮೇಲೆ ಚಿಕ್ಕ ಕೆಂಪು ಟೋಪಿ, ನೀಳ ಕಾಲುಗಳು, ಮೋಟು ನೀಲಿ ಬಾಲ, ತಳಭಾಗ ಬಿಳಿ ಬಣ್ಣದಿಂದ ಕೂಡಿರುತ್ತದೆ.

ಮತ್ತೊಂದೆಡೆ ದೇವನಕ್ಕಿ (ಬ್ರಾಂಜ್ ವಿಂಗ್ಡ್ ಜಸಾನಾ) ಮರಿಗಳಿಗೆ ವಾಕಿಂಗ್ ಮಾಡಿಸಿಕೊಂಡು ಆಹಾರದ ಬೇಟೆಯಲ್ಲಿ ತಲ್ಲೀನವಾಗಿತ್ತು. ಮರಿಗಳು ಕಮಲದ ಎಲೆಗಳ ಮೇಲೆ ಲೀಲಾಜಾಲವಾಗಿ ನಡೆದುಕೊಂಡು ತಾಯಿಯನ್ನು ಹಿಂಬಾಲಿಸುತ್ತಿದ್ದವು. ಮಿರುಗುವ ಕಪ್ಪು ಮಿಶ್ರಿತ ಹಸಿರು ಪಕ್ಷಿ. ಹಣೆಯ ಮೇಲೆ ಕೆಂಪು ತಿಲಕವಿದ್ದಂತೆ ಕೊಕ್ಕು, ಹಳದಿ ಕಾಲುಗಳು, ಇದರ ಬೆನ್ನು ಮತ್ತು ಮೋಟು ಬಾಲ ಕಂಚಿನ ಬಣ್ಣ, ಬಾಲದ ಕೆಳಗೆ ಕೆಂಪು ಬಣ್ಣ. ಇವುಗಳು ಜಲಸಸ್ಯಗಳಿಂದ ಕೂಡಿದ ತೇಲುವ ವೃತ್ತಾಕಾರದ ಗೂಡನ್ನು ಕಟ್ಟಿ ನಾಲ್ಕು ಕಂಚು ವರ್ಣದ ಮೊಟ್ಟೆಗಳಿಗೆ 61 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ. ಇವುಗಳ ಕಾಲ್ಬೆರಳುಗಳು ಜಲ ಸಸ್ಯಗಳ ಮೇಲೆ ಲೀಲಾಜಾಲವಾಗಿ ನಡೆಯಲು ಪೂರಕವಾಗಿವೆ.



ಬಿಳಿ ನಾಮದ ಕೋಳಿ



ಮರಿಗಳೊಂದಿಗೆ ವಾಕಿಂಗ್ ಹೊರಟ ದೇವನಕ್ಕಿ



ಮೊಟ್ಟೆಗಳ ರಕ್ಷಣೆಯಲ್ಲಿ ಅರಿಶಿನ ಕತ್ತು ಪಕ್ಷಿ

ಕೆರೆಯಲ್ಲಿ ಕಂಡುಬಂದ ಅರಿಶಿನದ ಕತ್ತಿನ ಪಕ್ಷಿ (ಫೆಸೆಂಟ್ ಟೇಲ್ಡ್ ಜಸಾನಾ) ಅತಿ ಸುಂದರ ಪಕ್ಷಿ. ಬಿಳಿ ತಲೆಯುಳ್ಳ ಕಂದು ಪಕ್ಷಿ. ಇದರ ತಲೆಯ ಹಿಂಭಾಗದಿಂದ ಭುಜದವರೆಗಿನ ಹಳದಿ ಪಟ್ಟಿಗೆ ಕಪ್ಪು ಅಂಚು ಕಂಡುಬರುತ್ತದೆ. ಇದರ ರೆಕ್ಕೆ ಬಿಳಿ, ಕೊಕ್ಕು ಹಾಗೂ ಕಾಲುಗಳು ಬೂದುನಿಂದ ಕೂಡಿರುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಉದ್ದವಾದ ಕಂದು ಬಾಲದ ಗರಿಗಳು ಮೂಡುತ್ತವೆ.

ಬಿಳಿ ನಾಮದ ಕೋಳಿ (ಕಾಮನ್ ಕೂಟ್). ಬಾತುಕೋಳಿ ಗಾತ್ರದ ಪಕ್ಷಿ. ಮೈ ಬಣ್ಣ ಕಪ್ಪು. ಹಣೆ ಮೇಲೆ ಬಿಳಿ ನಾಮ ಕಂಡುಬರುತ್ತದೆ. ಕೆರೆಗಳಲ್ಲಿ ಬಹಳ ದೂರದಿಂದ ಕೂಡ ಆ ಬಿಳಿ ನಾಮ ಸ್ಪಷ್ಟವಾಗಿ ಕಾಣುತ್ತದೆ.

ಮುಂಗಾರು ಮಳೆಯಲ್ಲಿ ಜಲ ವೈಭವದೊಂದಿಗೆ, ಕಂಡ ಹಕ್ಕಿಗಳ ಬದುಕಿನ ಚಿತ್ರಣ ಮನಸ್ಸಿನಲ್ಲಿ ಹರ್ಷ ತುಂಬಿತ್ತು. ■